


# ಶ್ರೀ ಜಯದೇವ (ಭಾಗ ೧)


ಕಥೆ : ಟಿ.ಎಂ. ಸುಂದರರಾಮನ್
ಚಿತ್ರ : ಶಂಕರ್

1 ಹನ್ನೆರಡನೇ ಶತಮಾನದಲ್ಲಿ ಪುರೀಕ್ಷೇತ್ರಕ್ಕೆ ಸಮೀಪದ ಕೆಂದಬಿಲ್ವ ಎಂಬ ಒಂದು ಗ್ರಾಮದಲ್ಲಿ ಭೋಜದೇವ ಹಾಗೂ ಭಾಮಾದೇವಿ ಎಂಬ ದಂಪತಿಗಳಿಗೆ ಮಗನಾಗಿ ಜನಿಸಿದವನೇ ಶ್ರೀ ಜಯದೇವ.

2 ಜಯದೇವನು ವಿದ್ಯಾಭ್ಯಾಸದಲ್ಲಿ ತುಂಬ ಚುರುಕು; ಅದೇ ರೀತಿ ಯಾವಾಗಲೂ ಉನ್ನತ ಆಧ್ಯಾತ್ಮಿಕ ಭಾವದಲ್ಲೇ ಇರುತ್ತಿದ್ದ. ಅವನಿಗೆ ಮದುವೆ ಮಾಡಿಸಬೇಕೆಂದು ಅವನ ಹೆತ್ತವರ ಬಯಕೆ. ಪುರಿಯಲ್ಲಿ ದೇವಶರ್ಮನೆಂಬ ಭಕ್ತನೊಬ್ಬನಿಗೆ ಕನಸಿನಲ್ಲಿ ಶ್ರೀ ಜಗನ್ನಾಥ ಪ್ರಭು ಕಾಣಿಸಿಕೊಂಡ ...




3 ದೇವಶರ್ಮನು ಕೆಂದಬಿಲ್ವ ಗ್ರಾಮಕ್ಕೆ ಹೋಗಿ ಜಯದೇವನ ತಂದೆಯನ್ನು ಭೇಟಿಯಾದ.




4 ಜಯದೇವ ಮತ್ತು ಪದ್ಮಾವತಿ ವಿವಾಹವಾದರು. ಜಯದೇವನು ಶ್ರೀಕೃಷ್ಣನನ್ನು ಕುರಿತು ಕಾವ್ಯರಚನೆ ಮಾಡುತ್ತಿದ್ದ. ಪದ್ಮಾವತಿ ನರ್ತಿಸುತ್ತಿದ್ದಳು. ಈ ರೀತಿ ಇಬ್ಬರೂ ಭಕ್ತಿ ಭಾವವನ್ನು ಬೆಳೆಸಿಕೊಳ್ಳುತ್ತಿದ್ದರು.



5 ಒಂದು ದಿನ ಜಯದೇವನು ಗೀತಗೋವಿಂದ ಕಾವ್ಯದ 19ನೇ ಅಷ್ಟಪದಿಯನ್ನು ರಚಿಸುತ್ತಿದ್ದಾಗ ...




ಈ ಹಾಡಿನ ಅರ್ಥವೇನೆಂದರೆ, ರಾಧೆಯು ತನ್ನ ಪಾದಗಳನ್ನು ಶ್ರೀಕೃಷ್ಣನ ತಲೆಯ ಮೇಲೆ ಇಡುತ್ತಾಳೆ ಎಂದು. ತನ್ನ ಈ ಕಲ್ಪನೆಗೆ ಸ್ವತಃ ಜಯದೇವನೇ ದಿಗ್ಭ್ರಮೆಗೊಂಡ.


6
ಓ ಕೃಷ್ಣಾ! ಇದೆಂಥ ವಿಡಂಬನೆ! ರಾಧೆಯ ಪಾದಗಳನ್ನು ನಿನ್ನ ತಲೆಯ ಮೇಲಿಡುವುದು ನ್ಯಾಯವೆ? ಇದನ್ನು ಊಹಿಸುವದಕ್ಕೂ ನನಗೆ ಸಾಧ್ಯವಿಲ್ಲ.
ಸ್ವಾಮಿ, ನೀವೇಕೆ ಚಿಂತಿಸುತ್ತಿದ್ದೀರಿ?
ಪದ್ಮಾವತಿ, ನಿನಗೆ ಈ ವಿಷಯದ ಬಗ್ಗೆ ಆಮೇಲೆ ಹೇಳುತ್ತೇನೆ. ಈಗ ಈ ತಾಳೆಯ ಗರಿಗಳನ್ನು ಒಳಗಿಡು. ನನ್ನ ಮನಸ್ಸೇಕೋ ಸರಿಯಿಲ್ಲ. ನದಿಗೆ ಹೋಗಿ ಸ್ನಾನ ಮಾಡಿ ಬರುತ್ತೇನೆ.
7
ಜಯದೇವ ನದಿಗೆ ಹೋಗಿ ಸ್ವಲ್ಪ ಹೊತ್ತು ಕಳೆಯುವಷ್ಟರಲ್ಲೇ ಯಾರೋ ಬಾಗಿಲು ಬಡಿದಂತಾಯಿತು. ಪದ್ಮಾವತಿ ಬಾಗಿಲು ತೆರೆದಾಗ ಜಯದೇವ ಒಳಗೆ ಬಂದ.
ಇದೇನು ಸ್ವಾಮಿ? ಈಗತಾನೇ ನೀವು ಸ್ನಾನ ಮಾಡಲು ನದಿಗೆ ಹೋದಿರಿ.
ನನ್ನ ಮನಸ್ಸಿನಲ್ಲೊಂದು ಶ್ಲೋಕ ಮೂಡಿಬಂತು. ತಾಳೆಗರಿಯನ್ನು ತೆಗೆದುಕೊಂಡು ಬಾ. ಈಗಲೇ ನಾನು ಅದನ್ನು ಬರೆದುಬಿಡುತ್ತೇನೆ.
ಜಯದೇವನು ಆ ಶ್ಲೋಕವನ್ನು ಬರೆದು ಮುಗಿಸಿದ. ಸ್ನಾನ ಮಾಡಿ ಊಟ ಮುಗಿಸಿ, ತನ್ನ ಕೋಣೆಗೆ ವಿಶ್ರಾಂತಿಗಾಗಿ ಹೋದ.
8
ಸ್ವಲ್ಪ ಹೊತ್ತಿನ ನಂತರ ನಿಜವಾದ ಜಯದೇವನು ಸ್ನಾನ ಮುಗಿಸಿ ಮನೆಗೆ ಮರಳಿದ. ಪದ್ಮಾವತಿ ಊಟ ಮಾಡುತ್ತಿದ್ದಳು.
ಪದ್ಮಾವತಿ, ಸಾಮಾನ್ಯವಾಗಿ ನೀನು ನನ್ನ ಊಟವಾದ ಮೇಲಷ್ಟೇ ಊಟ ಮಾಡುತ್ತಿದ್ದೆಯಲ್ಲ?
ಸ್ವಾಮಿ, ತಮಾಷೆ ಮಾಡುತ್ತಿದ್ದೀರಾ? ನೀವು ವೇಗವಾಗಿ ಶ್ಲೋಕ ರಚನೆ ಮಾಡಿ, ಊಟ ಮಾಡಿ, ವಿಶ್ರಾಂತಿಗೆ ಹೋದಿರಿ. ಇಷ್ಟು ಬೇಗನೆ ಎಲ್ಲವನ್ನೂ ಮರೆತು ಬಿಡುತ್ತೀರಾ?
ನಾನು ಈಗತಾನೇ ಬಂದೆ. ಎಲ್ಲಿ, ತಾಳೆಗರಿಯನ್ನು ತಂದುಕೊಡು.
9
ಅದನ್ನು ನೋಡಿ ಜಯದೇವನಿಗೆ ಆಶ್ಚರ್ಯವಾಯಿತು. ಆ ಶ್ಲೋಕಗಳನ್ನು ಅವನು ಮನಸ್ಸಿನಲ್ಲಿ ರಚಿಸಿದ್ದನಷ್ಟೆ; ತಾಳೆ ಗರಿಯಲ್ಲಿ ಬರೆದಿರಲಿಲ್ಲ. ಈಗ ತಾಳೆ ಗರಿಯಲ್ಲಿ ಬರೆದಿದ್ದುದನ್ನು ಕಂಡು ಅವನಿಗೆಲ್ಲವೂ ಅರ್ಥವಾಯಿತು — ಇದು ಶ್ರೀಕೃಷ್ಣನ ಲೀಲೆಯೇ ಇರಬೇಕೆಂದು.
ಕೃಷ್ಣ, ನೀನು ರಾಧೆಯ ಮಹಿಮೆಯನ್ನು ಈ ರೀತಿ ನನಗೆ ತಿಳಿಸಿಕೊಡುತ್ತಿದ್ದೀಯಾ? ಪದ್ಮಾವತಿ, ಶ್ರೀಕೃಷ್ಣನ ದರ್ಶನವನ್ನು ಪಡೆದ ನೀನೇ ಧನ್ಯೆ. ಅವನಿಗೆ ಉಣಬಡಿಸುವ ಹಾಗೂ ಅವನ ಪ್ರಸಾದ ಸ್ವೀಕರಿಸುವ ಪುಣ್ಯ ನಿನ್ನದಾಯಿತು.
ಸ್ವಾಮಿ, ಹಾಗಾದರೆ ಇಲ್ಲಿಗೆ ಬಂದವನು ನಮ್ಮ ಶ್ರೀಕೃಷ್ಣ ಪರಮಾತ್ಮನೆ?
ಈ ಘಟನೆಯ ಬಗ್ಗೆ ಕೇಳಿ ತಿಳಿದ ಜನರು ಜಯದೇವನ 'ಗೀತಗೋವಿಂದ ಕಾವ್ಯ'ದಿಂದ ಆಕರ್ಷಿತರಾದರು.


10
ಪುರೀಕ್ಷೇತ್ರದ ರಾಜನಾದ ಗಜಪತಿಯೂ ಒಬ್ಬ ಕವಿಯಾಗಿದ್ದ. ಅವನು ಒಂದು ದಿನ ಜಯದೇವನನ್ನು ಆಸ್ಥಾನಕ್ಕೆ ಕರೆಸಿದ.
ಜಯದೇವ, ನನ್ನೊಂದಿಗೆ ಸ್ಪರ್ಧಿಸಲು ನೀನು ಆ ಕಾವ್ಯವನ್ನು ರಚಿಸಿದೆಯಾ?
ಮಹಾರಾಜ, ಭಗವಾನ್ ಶ್ರೀಕೃಷ್ಣನ ಕೃಪೆಯಿಂದ ನಾನು ಅದನ್ನು ರಚಿಸಿದೆ. ನಿನ್ನೊಂದಿಗೆ ಸ್ಪರ್ಧಿಸಲು ರಚಿಸಲಿಲ್ಲ.
ಸರಿ, ಯಾರ ಕಾವ್ಯ ಶ್ರೇಷ್ಠವೆಂಬುದನ್ನು ಪ್ರಭು ಜಗನ್ನಾಥನೇ ತೀರ್ಮಾನಿಸಲಿ. ನಾವಿಬ್ಬರೂ ಸ್ಪರ್ಧಿಸೋಣ.
ಅವರಿಬ್ಬರೂ ತಮ್ಮ ಕಾವ್ಯದ ತಾಳೆ ಗರಿಗಳನ್ನು ಪ್ರಭು ಜಗನ್ನಾಥನ ಮುಂದಿರಿಸಿ, ಬಾಗಿಲು ಮುಚ್ಚಿ ಅಗಳಿ ಹಾಕಿದರು.
11
ಅಂದು ರಾತ್ರಿ ರಾಜನ ಕನಸಿನಲ್ಲಿ ಜಗನ್ನಾಥ ಪ್ರಭು ಕಾಣಿಸಿಕೊಂಡ.
ರಾಜ, ಜಯದೇವನ ಕಾವ್ಯವೇ ನನಗೆ ಪ್ರಿಯ. ನಿನ್ನ ಕೆಲವು ಹಾಡುಗಳನ್ನು ಅದರೊಂದಿಗೆ ಸೇರಿಸಿ ಅದರ ನೃತ್ಯ ನಾಟಕ ಪ್ರದರ್ಶನ ಮಾಡಿಸು.
12
ಮರುದಿನ ಬೆಳಿಗ್ಗೆ ದೇವಾಲಯವನ್ನು ತೆರೆದಾಗ ಜಯದೇವನ ಕಾವ್ಯವು ಜಗನ್ನಾಥ ಪ್ರಭುವಿನ ಪಾದಗಳ ಬಳಿ ಇತ್ತು. ರಾಜನ ಕಾವ್ಯವು ಮಹಾದ್ವಾರದ ಬಳಿ ಇತ್ತು. ತನ್ನ ತಪ್ಪಿಗಾಗಿ ರಾಜನಿಗೆ ಪಶ್ಚಾತ್ತಾಪವುಂಟಾಯಿತು.
13
ಆಹಾ! ಶ್ರೀ ಕೃಷ್ಣಪರಮಾತ್ಮನ ಕೃಪೆಗೆ ಎಣೆಯೇ ಇಲ್ಲ. ಸೇವಕರೆ, ಜಯದೇವನನ್ನು ಸೂಕ್ತ ಮರ್ಯಾದೆಗಳೊಂದಿಗೆ ಆಸ್ಥಾನಕ್ಕೆ ಕರೆತನ್ನಿ.
ಜಯದೇವ ಮತ್ತು ಪದ್ಮಾವತಿ ಕೆಲವು ವರ್ಷಗಳ ಕಾಲ ಅರಮನೆಯಲ್ಲಿ ವಾಸವಾಗಿದ್ದರು. ಅವರು ಶ್ರೀಕೃಷ್ಣ ಹಾಗೂ ರಾಧೆಯರ ಬಗ್ಗೆ ಹಾಡುತ್ತ ಕಾಲ ಕಳೆದರು.
14
ಒಂದು ದಿನ ರಾಜನ ಸಹೋದರ ತೀರಿಕೊಂಡ. ಅವನ ಪತ್ನಿ ಅವನ ಚಿತೆಗೆ ಹಾರಿ ಸತೀಸಹಗಮನ ಮಾಡಿ ಮರಣಹೊಂದಿದಳು – ಅಂದಿನ ಪದ್ಧತಿಯಂತೆ. ಈ ವಿಷಯವನ್ನು ರಾಣಿಯು ಪದ್ಮಾವತಿಗೆ ತಿಳಿಸಿದಳು.
ಪತಿವ್ರತೆಯಾದ ಆಕೆ ತನ್ನ ಪತಿಯ ಚಿತೆಗೆ ಹಾರಿ ತನ್ನ ಪ್ರಾಣತ್ಯಾಗ ಮಾಡಿದಳು.
ನಿಜವಾದ ಪತಿವ್ರತೆ ತನ್ನ ಪತಿಯ ಸಾವಿನ ಸುದ್ದಿ ಕೇಳಿದ ಕೂಡಲೇ ಪ್ರಾಣ ಬಿಡಬೇಕು, ಅಲ್ಲವೆ?
ರಾಣಿಗೆ ಪದ್ಮಾವತಿಯ ಮಾತುಗಳು ಎಷ್ಟು ಪ್ರಾಮಾಣಿಕ ಎಂಬುದನ್ನು ಪರೀಕ್ಷೆ ಮಾಡುವ ಮನಸ್ಸಾಯಿತು.

**15** ಒಂದು ದಿನ ಪುರಿಯ ರಾಜನು ಬೇಟೆಗೆ ಹೋದಾಗ ತನ್ನೊಂದಿಗೆ ಜಯದೇವನನ್ನು ಕರೆದುಕೊಂಡು ಹೋದ. ಈ ಅವಕಾಶವನ್ನು ಉಪಯೋಗಿಸಿಕೊಂಡಳು ರಾಣಿ. ಗುಟ್ಟಾಗಿ ಅವಳು ಅಗತ್ಯವಾದ ವ್ಯವಸ್ಥೆಯನ್ನೆಲ್ಲ ಮಾಡಿದಳು. ಅದರಂತೆ, ಒಬ್ಬ ರಾಜಭಟ ಓಡುತ್ತ ಬಂದ ...





**16** ಚೀತ್ಕಾರ ಮಾಡುತ್ತ ಕುಸಿದುಬಿದ್ದು, ಪದ್ಮಾವತಿ ಅಲ್ಲೇ ಸತ್ತುಹೋದಳು. ತಮಾಷೆಗಾಗಿ ರಾಣಿಯು ಮಾಡಿದ ಪರೀಕ್ಷೆ ಈಗ ಅನಾಹುತವಾಗಿ ಮಾರ್ಪಟ್ಟಿತು.

ರಾಜ ಮತ್ತು ಜಯದೇವ ಬೇಟೆ ಮುಗಿಸಿ ಮರಳಿದರು.




**17**






ದೇವರ ನಾಮವನ್ನು ಕೇಳಿದ ತಕ್ಷಣವೇ ಆನಂದಬಾಷ್ಪ ಸುರಿಯದೆ ಇರುವ ತನಕ ಸಾಧನೆ ಆವಶ್ಯಕ. ಭಗವಂತನ ಹೆಸರನ್ನು ಕೇಳಿದ ತಕ್ಷಣವೇ ಯಾರ ಹೃದಯ ಕರಗಿ, ಕಣ್ಣಿನಲ್ಲಿ ಆನಂದಬಾಷ್ಪ ಬರುವುದೋ ಅವನಿಗೆ ಯಾವ ಸಾಧನೆಯೂ ಬೇಕಾಗಿಲ್ಲ.

– ಶ್ರೀರಾಮಕೃಷ್ಣರು.